ಮೈಸೂರು ವಿಶ್ವವಿದ್ಯಾನಿಲಯ

**ದೈಹಿಕ ಶಿಕ್ಷಣ ವಿಭಾಗ**

**ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–05**

**ಡಾ. ಸಿ ವೆಂಕಟೇಶ್** **dir.deptofphyedn@gmail.com**

**ನಿರ್ದೇಶಕರು.** **Ph. No : 0821-2419288**


# ಪ್ರಕಟಣೆ ಕೃಪೆಗಾಗಿ

2024–2025ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾ ಕೂಟದ ಉದ್ಘಾಟನಾ ಸಮಾರಂಭವು ದಿನಾಂಕ: 16.04.2025 ರಂದು ಬೆಳಿಗ್ಗೆ 8.30ಕ್ಕೆ ಸಿಂಡಿಕೇಟ್ ಸದಸ್ಯರಾದ ಶ್ರೀ ನಾಗರಾಜು ಸಿ ಹಾಗೂ ಶ್ರೀ ಚೈತ್ರಾ ಅಂತರ ರಾಷ್ಟ್ರೀಯ ಖೋ–ಖೋ ಕ್ರೀಡಾಪಟು ರವರು ಉದ್ಘಾಟನೆ ಮಾಡಿದರು. ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಶ್ರೀ ಚೈತ್ರಾ ರವರಿಗೆ ಸನ್ಮಾನವನ್ನು ಮಾಡಿ ಮಹಿಳಾ ಕ್ರೀಡಾಪಟುಗಳನ್ನು ಉತ್ತೇಜನ ಮಾಡಲಾಯಿತು.




ಶ್ರೀ ನಾಗರಾಜು ಅವರು ಮಾತನಾಡಿ ಕ್ರೀಡೆಯಿಂದ ಬಡವರ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಬಡತನದಿಂದ ಬಂದ ಚೈತಾ ರವರು ಕುಟುಂಬವನ್ನು ನೋಡಿಕೊಳ್ಳಲು ಸಾಧ್ಯವಾಗಿರುವುದು ಕ್ರೀಡೆಯಿಂದಲೇ ಎಂದು ತಿಳಿಸಿದರು. ಕು. ಚೈತ್ರಾ ಅವರು ಮಾತನಾಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯಿಂದ ಮನ್ನಣೆಸಿಕ್ಕಿದೆ. ಕ್ರೀಡೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಸಿ.ವೆಂಕಟೇಶ್ ರವರು ವಹಿಸಿದರು. ಡಾ.ಪಿ.ಕೃಷ್ಣಯ್ಯ ರವರು ಉಪಸ್ಥಿತರಿದ್ದರು.

ಮೇಲಿನ ಸುದ್ದಿಯನ್ನು ತಮ್ಮ ಪ್ರತಿಷ್ಠಿತ ದಿನಪತ್ರಿಕೆಯಲ್ಲಿ ಪ್ರಕಟಿಸಿ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ನಿರ್ದೇಶಕರು